ಸಭೆಯಲ್ಲಿ ತೀರ್ಮಾನಿಸಲು ಸಾಧ್ಯವಾಗುತ್ತದೆ. ಏನೇ ಆದರೂ ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಕಳೆದ ಸಾಲಿನಲ್ಲಿ ರಾಜ್ಯ ಸರ್ಕಾರ ಮಧ್ಯ ಪ್ರವೇಶ ಮಾಡಿದ್ದರಿಂದ ಒಂದು ತಹಬಂದಿಗೆ ಬಂದಿದೆ. ಇದನ್ನು ಮುಂದುವರಿಸುವುದಕ್ಕೆ ಪರಿಶೀಲಿಸುತ್ತೇವೆ. ಅವರು ಇನ್ನೊಂದು ಕೋರಿಕೆಯನ್ನಿಟ್ಟಿದ್ದಾರೆ, ಕೇರಳ ರಾಜ್ಯದಲ್ಲಿ 10 ಕೆಜಿಗೆ 10 ರೂಪಾಯಿಯಂತೆ ಸಹಾಯಧನ ನೀಡಿ ರೈತರಿಗೆ ಅನುಕೂಲವಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ಈಗಾಗಲೇ ನಾನು ಅವರ ಪ್ರಶ್ನೆ ಬಂದಾಗ ಅವರು ಎಷ್ಟರಮಟ್ಟಿಗೆ ಕೊಡುತ್ತಿದ್ದಾರೆಂಬ ಬಗ್ಗೆ ಕೇರಳ ರಾಜ್ಯದಿಂದ ಮಾಹಿತಿಗಳನ್ನು ತರಿಸಿಕೊಂಡಿದ್ದೇನೆ. ಸಭೆ ಮಾಡುವಾಗ ಯಾವ ರೀತಿ ಮಾಡಬೇಕೆಂಬುದನ್ನು ಚರ್ಚಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3 ಗಂಟೆವರೆಗೆ ಮುಂದುಡುತ್ತಿದ್ದೇನೆ

(ಸದನವು ಮಧ್ಯಾಹ್ನ 1 ಗಂಟೆ 44 ನಿಮಿಷಕ್ಕೆ ಮುಂದುಡಲ್ಪಟ್ಟು ಪುನಃಮಧ್ಯಾಹ್ನ 3 ಗಂಟೆಗೆ ಸೇರಲು ತೀರ್ಮಾನಿಸಲಾಯಿತು)

(ಸದನವು 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್ ತಹಶೀಲ್ದಾರ್) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(5). ಶಾಸನ ರಚನೆ

ಉಪಾಧ್ಯಕ್ಷರು: ಈಗ ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

(ಅ) ಕರ್ನಾಟಕ ಗೃಹ ರಕ್ಷಕ ದಳ (ತಿದ್ದುಪಡಿ) ವಿಧೇಯಕ, 2003

ಶ್ರೀ ರಾಜಾ ಅಮರೇಶ್ವರ ನಾಯಕ (ಕಾರಾಗೃಹ, ಗೃಹರಕ್ಷಕದಳ ಮತ್ತು ಕಾನೂನು ಮಾಪನ ಶಾಸ್ತ್ರ ಸಚಿವರು): ಮಾನ್ಯ ಉಪಧ್ಯಾಕ್ಷರೆ, "2003ನೇ ಸಾಲಿನ ಕರ್ನಾಟಕ ಗೃಹ ರಕ್ಷಕ ದಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಉಪಾಧ್ಯಕ್ಷರು: ಮಾನ್ಯ ಸಚಿವರೇ ವಿಧೇಯಕ ಬಗ್ಗೆ ತಾವು ಎಕ್ಸ್‌ಪ್ಲೇನ್ ಮಾಡುತ್ತೀರಾ?

ಶ್ರೀ ರಾಜಾ ಅಮರೇಶ್ವರ ನಾಯಕ (ಕಾರಾಗೃಹ, ಗೃಹರಕ್ಷಕದಳ ಮತ್ತು ಕಾನೂನು ಮಾಪನಶಾಸ್ತ್ರ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಗೃಹರಕ್ಷಕದಳ ಸಂಸ್ಥೆಯು ಒಂದು ಸ್ವಯಂಸೇವಾ ಸಂಸ್ಥೆಯಾಗಿದೆ. ರಾಜ್ಯದ 27 ಜಿಲ್ಲೆಗಳಲ್ಲಿ ಈ ಗೃಹರಕ್ಷಕದಳ ಕಾರ್ಯವನ್ನು ನಿರ್ವಹಿಸುತ್ತಿದ್ದು, ಸುಮಾರು 18 ಸಾವಿರ ಗೃಹರಕ್ಷಕ ದಳ ಸ್ವಯಂಸೇವಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗೃಹರಕ್ಷಕದಳವು ಜಿಲ್ಲಾ ಕಛೇರಿಗಳಲ್ಲಿನ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ಸ್ಥಳೀಯ ಗೌರವಾನ್ವಿತ ವ್ಯಕ್ತಿಗಳನ್ನು ಗೃಹರಕ್ಷಕದಳ ಮಹಾ ಸಮಾದೇಷ್ಟಕರ ಶಿಫಾರಸ್ಸಿನ ಮೇರೆಗೆ ಸರ್ಕಾರದ ಗೌರವ ಸಮಾದೇಷ್ಟಕರನ್ನು ನೇಮಕ ಮಾಡಿರುತ್ತದೆ. ಈ ಜಿಲ್ಲಾ ಗೌರವ ಸಮಾದೇಷ್ಟಕರು ಕಛೇರಿಯ ಮುಖ್ಯಸ್ಥರಾಗಿರುತ್ತಾರೆ ಹಾಗೂ ಇವರಿಗೆ ಖಜಾನೆಯಿಂದ ಹಣವನ್ನು ತೆಗೆಯುವುದು ಮತ್ತು ಬಟವಾಡೆಯನ್ನು ಮಾಡುವುದು ಸ್ವಯಂಸೇವಕರ ಗೃಹ ರಕ್ಷಕರ ಆಯ್ಕೆ ಮತ್ತು ತರಬೇತಿ, ಕರ್ತವ್ಯ, ನಿಯೋಜನೆ ಹಾಗೂ ಇನ್ನಿತರಮೇಲ್ವಿಚಾರಣೆಯ ಕೆಲಸವನ್ನು ಜಿಲ್ಲಾ ಮಟ್ಟದ ಅಧಿಕಾರಿಗಳೊಂದೆ ಸಮನ್ವಯವನ್ನು ಹೊಂದಿ ಕೇಂದ್ರ ಕಛೇರಿಯ ನಿರ್ದೇಶನದ ಅನುಸಾರವಾಗಿ ಆಡಳಿತವನ್ನು ನಡೆಸುತ್ತಿರುತ್ತಾರೆ. ಕರ್ನಾಟಕ ಗೃಹರಕ್ಷಕ ಕಾಯಿದೆ 1962 ಕಲಂ:3 (2) ಇದರ ಅವಕಾಶದಡಿಯಲ್ಲಿ ರಾಜ್ಯಸರ್ಕಾರವು ಜಿಲ್ಲಾ ಗೃಹರಕ್ಷಕದಳದ ಗೌರವ ಸಮಾದೇಷ್ಟಕರನ್ನು ನೇಮಕ

ಮಾಡುತ್ತದೆ. ಜಿಲ್ಲಾ ಮಟ್ಟದ ಗೃಹರಕ್ಷಕದಳವು ಆದರೆ ಗೌರವ ಸಮಾದೇಷ್ಟಕರ ನೇಮಕಾತಿಯ ಆಯ್ಕೆ ವಿಧಾನ ಅಥವಾ ಅಧಿಕಾರದ ಅವಧಿಯನ್ನಾಗಲಿ ವಿದ್ಯಾರ್ಹತೆಯ ಬಗ್ಗೆ ಯಾಗಲಿ ಯಾವುದೇ ಅವಕಾಶವನ್ನು ಕಲ್ಪಿಸಲಾಗಿಲ್ಲ. ಜಿಲ್ಲಾ ಮಟ್ಟದ ಗೃಹರಕ್ಷಕದಳದ ಆಡಳಿತದಲ್ಲಿ ಮಹತ್ವದ ಪಾತ್ರವನ್ನು ಹೊಂದಿರುವ ಜಿಲ್ಲಾ ಗೌರವ ಸಮಾದೇಷ್ಟಕರ ಹುದ್ದೆಗೆ ಆಯ್ಕೆ ವಿಧಾನ, ವಿದ್ಯಾರ್ಹತೆ ಹಾಗೂ ಅಧಿಕಾರ ಅವಧಿ, ವಯೋಮಿತಿ ಮೊದಲಾದವುಗಳನ್ನು ಒಳಗೊಂಡಂತೆ ಆಯ್ಕೆ ವಿಧಾನ ಬಗ್ಗೆ ಕರ್ನಾಟಕ ಗೃಹರಕ್ಷಕ ಕಾಯ್ದೆಗೆ ಸೂಕ್ತ ಅವಕಾಶವನ್ನು ಮಾಡಿಕೊಡಬೇಕಾಗಿದೆ. ಈ ದಿಸೆಯಲ್ಲಿ ಇದೀಗ ಮಂಡಿಸಲಾದ ಗೃಹರಕ್ಷಕ ಕಾಯಿದೆ ತಿದ್ದುಪಡಿ ಜಿಲ್ಲಾ ಗೃಹರಕ್ಷಕ ದಳದ ಗೌರವ ಸಮಾದೇಷ್ಟಕರುಗಳ ನೇಮಕಾತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತಹ ಅಂಶಗಳನ್ನು ಹೊಂದಿರುತ್ತದೆ. ಆಯ್ಕೆ ಸಮಿತಿ: ಅರ್ಹರನ್ನು ಜಿಲ್ಲಾ ಗೃಹರಕ್ಷಕದಳ ಗೌರವ ಸಮಾದೇಷ್ಟಕರನ್ನಾಗಿ ನೇಮಕ ಮಾಡಲು ಉನ್ನತ ಮಟ್ಟದ ಅಧಿಕಾರಿಗಳನ್ನು ಒಳಗೊಂಡ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು ಎಲ್ಲಾ ಕಾರ್ಯ ವಿಧಾನಗಳನ್ನು ಅನುಸರಿಸಿ ಸೂಕ್ತ ಅ ಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂತಹ ಪಟ್ಟಿಯನ್ನು ರಾಜ್ಯಸರ್ಕಾರಕ್ಕೆ ಮಂಡಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಸೇವಾವಧಿ: ಸರ್ಕಾರದಿಂದ ನೇಮಕಗೊಳ್ಳುವ ಗೌರವ ಜಿಲ್ಲಾ ಸಮಾದೇಷ್ಟಕರುಗಳ ನೇಮಕಾತಿಯ ನಿರ್ದಿಷ್ಟ ಅವಧಿಯನ್ನು ನಿಗಧಿಪಡಿಸುತ್ತದೆ. ಈ ಮೇರೆಗೆ ಸಾಮಾನ್ಯವಾಗಿ ಸಮಾದೇಷ್ಟಕರುಗಳ ಸೇವಾವಧಿಯ 5 ವರ್ಷಗಳಾಗಿರುತ್ತವೆ. ಆದರೆ ಈ ಅವಧಿಯನ್ನು ಮುಂದಿನ 5 ವರ್ಷಗಳ ಅವಧಿಗೆ ವಿಸ್ತರಿಸುವ ಅವಕಾಶವನ್ನು ಕಲ್ಪಿಸ ಬಹುದಾಗಿದೆ. ಇದರಿಂದ ಸಮಾದೇಷ್ಟಕರುಗಳ ಸೇವಾವಧಿಯ ಬಗ್ಗೆ ಅನಿಶ್ಚತತೆಯನ್ನು ಹೋಗಲಾಡಿಸಲು ಅವಕಾಶವು ಲಭಿಸಿದೆ. ಅಲ್ಲದೆ ಇನ್ನೊಂದು ಅವಧಿಗೆ ಅವಕಾಶವಿರುವುದರಿಂದ ಪ್ರಥಮ ನೇಮಕಾತಿ ಹೊಂದಿರುವ ಗೌರವ ಸಮಾದೇಷ್ಟಕರುಗಳ ಕಾರ್ಯಾದಕ್ಷತೆ, ಮತ್ತು ನೈಪುಣ್ಯತೆಯನ್ನು ನಿರೀಕ್ಷಿಸಬಹುದಾಗಿದೆ. ಜಿಲ್ಲಾ ಗೃಹರಕ್ಷಕ ದಳದ ಸಮಾದೇಷ್ಟಕರುಗಳ ನೇಮಕಾತಿಗೆ ಸಂಬಂಧಿಸಿದಂತೆ ನಿಬಂಧನೆ ಮತ್ತು ಷರತ್ತುಗಳನ್ನು ರೂಪಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಅದೇ ರೀತಿಯಾಗಿ ಆಯ್ಕೆಯ ವಿಧಾನ, ವಯಸ್ಸು ಮತ್ತು ವಿದ್ಯಾರ್ಹತೆ ಮೊದಲಾದವುಗಳ ಬಗ್ಗೆ ನಿಯಮಗಳನ್ನು ರೂಪಿಸಲು ಅವಕಾಶವನ್ನು ಕಲ್ಪಿಸಬಹುದಾಗಿದೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ (ಬ್ರಹ್ಮಾವರ): ಮಾನ್ಯ ಉಪಾಧ್ಯಕ್ಷರೆ, ಈಗ ಆಯ್ಕೆಗಾಗಿ ಒಂದು ಸಮಿತಿಯನ್ನು ಮಾಡುತ್ತಾರೆ. ಆಯ್ಕೆಗಾಗಿ ಸಮಿತಿಯನ್ನು ಮಾಡಿ ಅವರಿಗೆ ಆಯ್ಕೆ ಮಾಡುವ ಬಗ್ಗೆ ಅಧಿಕಾರ ಇದೆಯೋ ಅಥವಾ ಇಲ್ಲವೋ, ಏಕೆಂದರೆ, ಸರ್ಕಾರಕ್ಕೆ ಮಂಡಿಸುವುದೆಂದರೆ, ಇವರು ಪಟ್ಟಿಯನ್ನು ಮಾಡಿ ಸರ್ಕಾರಕ್ಕೆ ಮಂಡಿಸುವುದು ಅಂತಹದರ ಬಗ್ಗೆ ಹೇಳಬೇಕು. ಮತ್ತೆ ಕ್ವಾಲಿಫಿಕೇಷನ್ ಬಗ್ಗೆ, 5 ವರ್ಷಗಳವರೆಗೆ ಮತ್ತು ಎಕ್ಸ್‌ಟೆನ್‌ಷನ್‌ಗೆ ಸರ್ಕಾರಕ್ಕೆ ಅಥವಾ ಸಮಿತಿಗೆ ಪುನ : ಇದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಎಕ್ಸ್‌ಟೆನ್‌ಷನ್ ಆಫ್ ಪೀರಿಯಡ್ ನೇಮಕಾತಿ ಆದ ಮೇಲೆ;

ಶ್ರೀ ರಾಜಾ ಅಮರೇಶ್ವರ ನಾಯಕ: ಈಗಾಗಲೇ ಹೇಳಿದಂತೆ ಹಿಂದೆ ಹೋಂಗಾರ್ಡ್ಸ್ ಡಿಜಿಯವರು ಪ್ರಸ್ತಾವಿಸಿದಂತಹ ಆಯ್ಕೆ ಪಟ್ಟಿಯಲ್ಲಿರುವವರನ್ನು ಸರ್ಕಾರ ನೇಮಕ ಮಾಡತಕ್ಕಂಥದ್ದು ಆಗುತ್ತಿತ್ತು. ಈಗ ಅದಕ್ಕೊಂದು ಕಮಿಟಿಯನ್ನು ಮಾಡಿ ಡಿಜಿಯವರ ಜೊತೆಗೆ ಹೋಂ ಸೆಕ್ರೆಟರಿ ಹಾಗೂ ಡೆಪ್ಯೂಟಿ ಕಮಾಂಡೆಂಟ್ ಜನರಲ್ ಈ ಮೂವರನ್ನೊಳಗೊಂಡ ಸಮಿತಿ ಸ್ಥಳೀಯ

ಗೌರವಾನ್ವಿತ ವ್ಯಕ್ತಿಗಳ ಪಟ್ಟಿಯನ್ನು ಪರಿಷ್ಕರಿಸಿ ಅದನ್ನು ಸರ್ಕಾರಕ್ಕೆ ಸಲ್ಲಿಸತಕ್ಕಂಥದ್ದು, ತದನಂತರ ಸರ್ಕಾರ ಸದರಿ ಪಟ್ಟಿಯಲ್ಲಿರುವ ಯಾರಾದರೂ ಒಬ್ಬರನ್ನು ನೇಮಕಾತಿ ಮಾಡುತ್ತದೆ. ಅದೇ ರೀತಿಯಾಗಿ ಅವಧಿ ನಿಗದಿ ಇರಲಿಲ್ಲ, ಕಾಲಮಿತಿ ಇರದೆ ಸೇವೆ ಸಲ್ಲಿಸತಕ್ಕಂಥದ್ದು ಇದೆ, ಒಂದು ಅವಧಿಯನ್ನು ನಿರ್ದಿಷ್ಟ ಮಾಡಿದರೆ ಆ ಅವಧಿಯಿಂದ 5 ವರ್ಷ ಸೇವೆ ಸಲ್ಲಿಸಲು ಅವಕಾಶವಿರುತ್ತದೆ. ಈ ಅವಧಿಯಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿದವರಿಗೆ ಪುನ: 5ವರ್ಷ ಅವಧಿ ಕೊಡುವುದಕ್ಕೆ ಅವಕಾಶವಿರುತ್ತದೆ. ಈವರೆಗೆ ನಿರ್ದಿಷ್ಟವಾದಂತಹ ಯಾವುದೇ ನಿಯಮಗಳಿಲ್ಲ, ಆದರೆ ಇಲಾಖಾ ಕೈಪಿಡಿಯಲ್ಲಿರುವಂತೆ ನೇಮಕಾತಿ ಮಾಡಲಾಗುತ್ತಿತ್ತು. ಆ ದೃಷ್ಟಿಯಿಂದ ಇವತ್ತು ಏನು ಸದಸ್ಯರು ಸಲಹೆಗಳನ್ನು ಕೊಡುತ್ತಾರೆ, ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ರೂಲ್ಸ್‌ಗಳನ್ನು ಫ್ರೇಮ್ ಮಾಡತಕ್ಕಂಥ ಸಂದರ್ಭದಲ್ಲಿ ಆ ವಿದ್ಯಾರ್ಹತೆಯನ್ನು ನಮೂದಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಮಾನ್ಯ ಉಪಾಧ್ಯಕ್ಷರೆ, ಇದು ಒಂದು ರೆಕಮಾಂಡಿಂಗ್ ಬಾಡಿ ಮಾತ್ರ. ಈ ಕಮಿಟಿ ಏನಿದೆ, ಇದರಲ್ಲಿ ರೆಕಮಂಡೇಷನ್ ಮಾಡುವುದಕ್ಕೆ ಮಾತ್ರ ಅಧಿಕಾರವಿದೆ. ಇದರಲ್ಲಿ ಬೇರೆ ಯಾವುದೇ ಅಧಿಕಾರವಿರುವುದಿಲ್ಲ. ಇವರು ಸೆಲೆಕ್ಟ್‌ನ್ ಮಾಡಿದಂತಹ ಪಟ್ಟಿಯನ್ನು ಇಂತಹವರನ್ನು ಎಂದು ಕಳುಹಿಸುವುದಾ? ಅಲ್ಲಾ ಟೋಟಲ್ ಪಟ್ಟಿಯನ್ನು ಮಾತ್ರ ಕಳುಹಿಸುವುದಕ್ಕೆ ಇವರಿಗೆ ಅಧಿಕಾರ ಇರುವಂತಹದ್ದಾ?

ಶ್ರೀ ರಾಜಾ ಅಮರೇಶ್ವರ ನಾಯಕ್: ಈವರೆಗೆ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ಪಟ್ಟಿಯನ್ನು ಕಳುಹಿಸುತ್ತಿದ್ದರು. ಹೋಂಗಾರ್ಡ್ಸ್ ಡಿಜಿಪಿಯವರು ಆ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕಂಥದ್ದು ಇದೆ. ಹೀಗೆ ಕಮಿಟಿ ಮಾಡುವುದರಿಂದ ಸಾಕಷ್ಟು ಇರುವ ಹೆಸರುಗಳ ಪಟ್ಟಿಯಿಂದ ಅರ್ಹ ವ್ಯಕ್ತಿಗಳನ್ನೊಳಗೊಂಡ ಒಂದು ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಅವಕಾಶವಾಗುತ್ತದೆ. ನೇಮಕ ಮಾತ್ರ ಸರ್ಕಾರ ಮಾಡುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಉಪಾಧ್ಯಕ್ಷರೆ, ಈಗ ಸ್ವಲ್ಪ ಕಾಂಟ್ರಡಿಕ್ಷನ್ ನನಗೆ ಕಾಣುತ್ತದೆ. ಆ 2(ಎ)ನಲ್ಲಿ (2)ನೇ ಉಪಪ್ರಕರಣದ ಅಡಿಯಲ್ಲಿ ಕಮಾಡೆಂಟ್‌ಗಳಾಗಿ ನೇಮಕಗೊಳ್ಳಲು ನಿಯಮಿಸಲಾದ ವಿದ್ಯಾರ್ಹತೆಯನ್ನು ಹೊಂದಿದೆ ವ್ಯಕ್ತಿಗಳ ಆಯ್ಕೆಗಾಗಿ ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ಸಮಿತಿಯು ಇರತಕ್ಕದ್ದು ಎಂದು ಹೇಳುತ್ತೀರಿ. ಆ ಸಮಿತಿಯ ಕೆಲಸವೇ ಆಯ್ಕೆಮಾಡುವುದಕ್ಕೆ ಎಂದು ನೀವು ಹೇಳುವುದಿಲ್ಲ. ಯಾವುದರಲ್ಲಿ ಎಂದರೆ 2ನೇ ಉಪಪ್ರಕರಣದಲ್ಲಿ. ಮುಂದೇ ಹೇಳುತ್ತೀರಾ? ಕಮಾಂಡೆಂಟ್ ನೇಮಕಗೊಳ್ಳಲು ವ್ಯಕ್ತಿಗಳ ಒಂದು ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಅಂಥ ಆಯ್ಕೆಗೊಂಡ ವ್ಯಕ್ತಿಗಳ ಪಟ್ಟಿಯನ್ನು ರಾಜ್ಯಸರ್ಕಾರಕ್ಕೆ ಕಳುಹಿಸತಕ್ಕದ್ದು. ಇವರೇ ಆಯ್ಕೆ ಮಾಡುವುದು ಎಂದು ಹೇಳುತ್ತೀರಾ, ಆ ಪಟ್ಟಿಯನ್ನು ಮಾತ್ರ ಸರ್ಕಾರಕ್ಕೆ ಕಳುಹಿಸುವುದು ಎನ್ನುತ್ತೀರಿ ಇದು ಹೇಗೆ?

ಶ್ರೀ ರಾಜಾ ಅಮರೇಶ್ವರ ನಾಯಕ್: ಮಾನ್ಯ ಸದಸ್ಯರಾದ ಶ್ರೀ ಎಸ್.ಸುರೇಶ್‌ಕುಮಾರ್ ರವರು ಹೇಳಿರುವಂತಹ ವಿಚಾರ ಈಗಾಗಲೇ ವ್ಯಕ್ತಿಗಳ ಪಟ್ಟಿಯನ್ನು ಒಂದು ಪ್ಯಾನಲ್ ಆಫ್ ನೇಮ್ಸ್ ಜಿಲ್ಲಾ ಮಟ್ಟದಿಂದ ಬಂದು ಹೋಂಗಾರ್ಡ್ಸ್ ಡಿಜಿಪಿಯವರಿಂದ ಗೃಹ ಕಾರ್ಯದರ್ಶಿಯವರಿಗೆ ಬರುತ್ತಿತ್ತು. ಇಲ್ಲಿ ಒಂದು ಕಮಿಟಿ ಮಾಡುವ ಮುಖಾಂತರ ಆ ಪ್ಯಾನಲ್ ಆಫ್ ನೇಮ್ಸ್‌ನ್ನು ಸರ್ಕಾರಕ್ಕೆ ಕಳುಹಿಸಿಕೊಡತಕ್ಕಂಥದ್ದು ಅದರಲ್ಲಿ ಸರ್ಕಾರ ನೇಮಕಾತಿ ಮಾಡತಕ್ಕಂಥದ್ದು ಇದೆ.

ಶ್ರೀ ಎಸ್. ಸುರೇಶ್‌ಕುಮಾರ್: ಇಲ್ಲಿ ಎರಡನೇ ಉಪಪ್ರಕರಣದ ಅಡಿಯಲ್ಲಿ: ಕಾನೂನು ಸಚಿವರೆ, ಈ ತಿದ್ದುಪಡಿಗೆ ಒಂದು ತಿದ್ದುಪಡಿಯನ್ನು ತರಬೇಕು. ಅವರು ವ್ಯಕ್ತಿಗಳ ಆಯ್ಕೆಗಾಗಿ ಎಂದು ಹಾಕಿದ್ದಾರೆಯೇ ಹೊರತು ವ್ಯಕ್ತಿಗಳ ಪಟ್ಟಿಗಳ ಆಯ್ಕೆಗಾಗಿ: ಎಂದು ಆಗುತ್ತಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಉಪಾಧ್ಯಕ್ಷರೆ, ಈಗ ಒಂದು ವೇಳೆ ಸಮಿತಿಯು ಮಾಡಿದಂತಹ ಪಟ್ಟಿಯನ್ನು ಯಾರೊಬ್ಬ ವ್ಯಕ್ತಿಯನ್ನು ಆಯ್ಕೆ ಮಾಡುವುದಾದರೆ ಆಯ್ಕೆ ಸಮಿತಿಯಾಗುತ್ತದೆ. ಇಲ್ಲದಿದ್ದರೆ ವೈಸ್ ಚಾನ್ಸಲರ್ ಸೆಲೆಕ್ಷನ್‌ಗೆ ಪಟ್ಟಿಯನ್ನು ಮಾಡುವುದಕ್ಕೆ ಒಂದು ಸಮಿತಿ ಇದೆ ಅಡ್ವೈಸರಿ ಬಾಡಿ ಎಂದೂ ಇರುತ್ತದೆ. ಆ ತರಹ ಒಂದು ಪಟ್ಟಿಯನ್ನು ಕಳುಹಿಸುವುದಾದರೆ ಅದು ಆಯ್ಕೆ ಸಮಿತಿಯಾಗುವುದಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಉಪಾಧ್ಯಕ್ಷರೆ, The procedure now proposed to be adopted is very good. ಮೊದಲು ಏನು ಆಯಿತು, ಸರ್ಕಾರ ನೇಮಕ ಯಾರೋ ಒಬ್ಬರು ಮಾಡುತ್ತಿದ್ದರು, ಈಗ ತಾವು ಅದರಲ್ಲಿ ಒಬ್ಬ ಸಂಬಂಧಪಟ್ಟಂತಹ ಸೆಕ್ರೆಟರಿ ಟು ಗೌರ್ನಮೆಂಟ್, ಕಮಾಂಡೆಂಟ್ ಜನರಲ್, ಡೆಪ್ಯೂಟಿ ಕಮಾಂಡೆಂಟ್ ಜನರಲ್‌ನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಿ ಅದರ ಮುಖಾಂತರ ಆಯ್ಕೆ ಮಾಡುತ್ತಿರುವುದು ನಿಜವಾಗಿಯೂ ಒಳ್ಳೆಯ ಪ್ರೊಸೀಜರ್. ಈಗ ಇದರ ಪ್ರಕಾರ ನೀವು ಏನು ಅಮೆಂಡ್‌ಮೆಂಟ್ ಸೆಕ್ಷನ್ 2(ಎ) ತಂದಿದ್ದೀರಲ್ಲಾ.

" The Committee referred to in sub-section (2A) shall after following such procedure as may be prescribed...." prescribed by rules

" ... prepare a list of selected persons to be appointed as commandants.." prepare a list of selected persons, ಎಂದು ಹಾರಿದ್ದೀರಿ, ಅಂದರೆ, they are already selected ಎನ್ನತಕ್ಕಂತಹ ಅರ್ಥ ಬರುತ್ತದೆ. ನೀವು ಹೇಳುವುದು ಸರಿಯಾಗಿದೆ. ಸಪೋಸ್ ಏನಾದರೂ ಪ್ರಿಪೇರ್ ಮಾಡತಕ್ಕಂಥದ್ದು ಪ್ಯಾನಲ್ ಆಫ್ ನೇಮ್ಸ್, out of which the government is at liberty to select one person, ಎಂದು ಸ್ಪೆಸಿಫಿಕ್ಕಾಗಿ ಹೇಳಿದರೆ ಒಳ್ಳೆಯದಾಗುತ್ತದೆ. Otherwise it will create some sort of ambiguity.

ಶ್ರೀ ಎಸ್. ಸುರೇಶ್‌ಕುಮಾರ್: ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಮೆಂಡ್‌ಮೆಂಟ್ ಆಫ್ ಸೆಕ್ಷನ್-3ನ್ನು ಓದಿ ಅದರ ಮುಂಚೆ

"(i) in sub-section (2), for the words "The State Government may" ಆ ಜಾಗದಲ್ಲಿ

" the words, figure, letter and brackets ' The State Government may from the list of persons sent by the Committee..." ಅವರು ಏನು ಲಿಸ್ಟ್‌ನ್ನು ಕಳುಹಿಸುತ್ತಾರೆ, ಅದರಿಂದ ಇವರು ಆಯ್ಕೆ ಮಾಡುವುದು ಅದರಲ್ಲಿ ಅಮೆಂಡ್‌ಮೆಂಟ್ ಇರುವುದು.

ಶ್ರೀ ಎಸ್.ಪಿ ಮುದ್ದಹನುಮೇಗೌಡ: ಇಲ್ಲಿ ಏನಾಗಿದೆ, now, of course, you are clear. ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದರೆ, ಈಗ they will prepare only the panel of names, out of which the government can select one person ಎಂದು ತಾವು ಹೇಳುತ್ತಿದ್ದೀರಿ. But, that is not so in the proposed amendment ಇಲ್ಲಿ ನೀವು ಏನು ಹೇಳುತ್ತೀರಿ,

"The Committee referred to in sub-section (2A) shall after following such procedure as may be prescribed prepare a list of selection persons..."

You cannot use the word 'selected' if he is not selected. If the liberty of selection is with the government, then you cannot say that the Committee can select a person. ಈಗ ನಿಮ್ಮ ಪ್ರಕಾರ ಏನೆಂದರೆ, they can only prepare a list of candidates, out of which the government is at liberty to select the suitable candidates. ಅನ್ನುವ ತರಹ ನೀವು ಹೇಳುವುದಾದರೆ, ಅದಕ್ಕೆ ಸ್ವಲ್ಪ instead of creating some Sort of ambiguity, you must be very specific. ಅದನ್ನು ನೋಡಿ ತಾವು ಯಾವ ರೀತಿಯಾಗಿ ಮಾಡುತ್ತೀರಾ? ಇಲ್ಲ ಅಂದರೆ if you are asserting that this Committee can select the candidates ಅದರಲ್ಲಿ ಕ್ಲಿಯರ್ ಆಗಿ ಹೇಳಿಬಿಡಬಹುದು, it is the duty of the Committee to select the commandants.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಅವರು ಪಟ್ಟಿಯನ್ನು ಕಳುಹಿಸುವುದಾದರೆ ಇದನ್ನು ಎಕ್ಸ್‌ಪರ್ಟ್ಸ್ ಕಮಿಟಿ ಎಂದು ಕರೆಯಬೇಕು, ಅವರೇ ಸೆಲೆಕ್ಟ್ ಮಾಡಿ ಕಳುಹಿಸುವುದಾದರೆ ಸೆಲೆಕ್ಷನ್ ಕಮಿಟಿ ಎಂದು ಕರೆಯಬೇಕಾಗುತ್ತದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಯೂನಿವರ್ಸಿಟಿಯಲ್ಲಿ ವೈಸ್ ಚಾನ್ಸ್‌ಲರ್‌ಗಳು ಮಾಡಬೇಕಾದರೆ ಅಲ್ಲಿ ಒಂದು ಸಮಿತಿಯನ್ನು ಮಾಡಿ, ಅವರು ಒಂದು ಪ್ಯಾನಲ್ ಆಫ್ ನೇಮ್ಸ್‌ನ್ನು ಮಾಡಿ ಗೌರ್ನರ್‌ಗೆ ಕಳುಹಿಸತಕ್ಕಂಥದ್ದು, ಗೌರ್ನರ್ ಅಪಾಯಿಂಟ್ ಮಾಡುವುದಕ್ಕೆ ಒಂದು ಪ್ರೊಸೀಜರ್ ಇದೆ. ಆ ರೀತಿ ಏನಾದರೂ ಒಂದು ತಜ್ಞರ ಸಮಿತಿ only to prepare the panel of names, ಅನ್ನುವ ತರಹ ಇದ್ದರೆ ಅದನ್ನು ಸ್ಪೆಸಿಫಿಕ್ಕಾಗಿ ಹೇಳಿ. ಇಲ್ಲಾವೆಂದರೆ it is their duty to select the commandants, they are at liberty to select the candidates. ಎಂದಾದರೂ ಹೇಳಬೇಕಾಗುತ್ತದೆ. Now, the proposed amendment, I think, is not free from the ambliguilty. You must be very specific. ಸೆಲೆಕ್ಟ ಮಾಡತಕ್ಕಂಥವರು ಯಾರೂ ಎನ್ನುವುದನ್ನು ಸ್ಪೆಸಿಫಿಕ್ಕಾಗಿ ಹೇಳಿ.

ಶ್ರೀ ರಾಜಾ ಅಮರೇಶ್ವರ ನಾಯಕ್: ಹಿಂದೆ ಒಂದು ಪಟ್ಟಿಯನ್ನು ತರಿಸಿಕೊಂಡು ಹೋಂಗಾರ್ಡ್ಸ್ ಡಿಜಿಪಿಯವರಿಂದ ಸರ್ಕಾರಕ್ಕೆ ಕಳುಹಿಸತಕ್ಕಂಥದ್ದು ಇತ್ತು. ಸರ್ಕಾರದ ಉದ್ದೇಶ ಆ ಪ್ಯಾನಲ್ ಆಫ್ ನೇಮ್ಸ್‌ನ್ನು ಈ ಸಮಿತಿ ಸ್ಕ್ರೂಟಿನೈಸ್ಡ್ ಮಾಡಿ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡತಕ್ಕಂಥದ್ದು, ಸರ್ಕಾರ ನೇಮಕಾತಿ ಮಾಡತಕ್ಕಂಥದ್ದು ನಮ್ಮ ಉದ್ದೇಶವಾಗಿರುತ್ತದೆ. ಅದರ ಜೊತೆಗೆ ಇವುಗಳಲ್ಲಿ ವಿದ್ಯಾರ್ಹತೆ ಮತ್ತು ಸೇವಾವಧಿಯೆಲ್ಲವನ್ನೂ ಸಹ ಇಲ್ಲಿ ಒಂದು ಕಮಿಟಿಯ ಮುಖಾಂತರ ಸ್ಕ್ರೂಟನೈಸ್ಡ್ ಮಾಡುವುದರಿಂದ ಆ ಪಟ್ಟಿಯಲ್ಲಿರುವ ಉತ್ತಮವಾದಂತಹ ಅಭ್ಯರ್ಥಿಯನ್ನು ಆಯ್ಕೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವುದೇ ಸರ್ಕಾರದ ಉದ್ದೇಶವಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್: ಸಭಾಧ್ಯಕ್ಷರೇ, there is a contradiction again. ಕಮಿಟಿಯಿಂದ ಸರ್ಕಾರಕ್ಕೆ ಬಂದಿದ್ದ ಲಿಸ್ಟ್‌ನಲ್ಲಿ ನಾವು ಸೆಲೆಕ್ಟ್ ಮಾಡಬೇಕು ಅನ್ನುವ

ಹಾಗಿದ್ದರೆ ಇಲ್ಲಿ "The Committee referred to in sub-section (2A) shall after following such procedure as may be prescribed prepare a list of selection persons ಎಂದು ಹಾಕಬಾರದು ಸೆಲ್ ಲಿಸ್ಟ್ ಆಫ್ ಸೆಲೆಕ್ಟಡ್ ಪರ್ಸನ್ಸ್ ಎಂದು ನೀವು ಮಾಡಿದ ಮೇಲೆ ಅದರಲ್ಲಿ ಸರ್ಕಾರ ಹೇಗೆ ಆಯ್ಕೆ ಮಾಡುತ್ತದೆ? ಈಲಿ ಆಫ್ ಪರ್ಸನ್ಸ್ ಮಾಡಬೇಕು, ಅದರಲ್ಲಿ ಅವರು ಆಯ್ಕೆ ಮಾಡಬೇಕು. ಒಂದು ಸಾರಿ ಕಮಿಟಿ ಸೆಲೆಕ್ಟ್ ಮಾಡಿದ ಮೇಲೆ ಮತ್ತೆ ಆ ಸೆಲೆಕ್ಟ್ ಆಗಿದ್ದರಲ್ಲಿ ಮತ್ತೆ ಗವರ್ನಮೆಂಟ್ ಸೆಲೆಕ್ಟ್ ಮಾಡುತ್ತಾರೆಯೇ? ಫ್ಯಾನೆಲ್ ಆಫ್ ನೇಮ್ಸ್ ರೆಫರೆನ್ಸ್ ಕಳುಹಿಸಬೇಕು. The Committee will send a panel of names. ಅದರಿಂದ ಸರ್ಕಾರ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುತ್ತದೆ. The word 'selected' has to be deleted.

ಶ್ರೀ ಎಸ್.ಪಿ. ಮುದ್ದುಹನುಮೇಗೌಡ: ಪ್ಯಾನೆಲ್ ಅಂತ ಸೇರಿಸಬೇಕು ಅಷ್ಟೆ.

ಶ್ರೀ ಡಿ.ಎ. ಸದಾನಂದಗೌಡ: ಮಾನ್ಯ ಚಂದ್ರೇಗೌಡರೇ, ಇಲ್ಲಿ even otherwise ಸ್ವಲ್ಪ ambiguity ಇದೆ. 'List of selected persons to be appointed.' ಅಂತ ಕೊಟ್ಟಿದ್ದಾರೆ. 'List of persons to be appointed. ಎಂದು ಮಾಡಬೇಕು. 'Selected persons' ಅಂತ ಆದರೆ they are already selected, ಅವರೇನು ಹೇಳುತ್ತಾರೆ ಲಿಸ್ಟ್ ಅನ್ನು ಕಳುಹಿಸಿ, ಸರ್ಕಾರ ಸೆಲೆಕ್ಟ್ ಮಾಡುತ್ತದೆ ಅಂತ ಹೇಳಿ, ಹಾಗಾದರೆ ಲಿಸ್ಟ್ ಮಾಡಿ ಕಳುಹಿಸುವ ಜವಾಬ್ದಾರಿ ಮಾತ್ರ ಅವರದ್ದು. Selection has to be done by the Government, you know. ಇದರಲ್ಲಿ ಸ್ವಲ್ಪ ಕನ್‌ಫ್ಯೂಷನ್ ಇದೆ ನೋಡಿ.

SRI D.B. CHANDRE GOWDA: Sir,

"The Committe referred to in sub-section (2A) shall after following such procedure as may be ...."

ಶ್ರೀ ಎಸ್.ಎಸ್. ಪಾಟೀಲ್: ಕನ್ನಡದಲ್ಲಿ ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ: ಇಂಗ್ಲೀಷ್‌ನಲ್ಲಿ ಕೇಳಿದವರಿಗೆ ಇಂಗ್ಲೀಷ್‌ನಲ್ಲಿ ಉತ್ತರಿಸಬೇಕಲ್ಲವೇ? ಕಮಾಂಡೆಂಟ್ ನೇಮಕ ಮಾಡುವ ಪ್ರಕ್ರಿಯೆಗಳಲ್ಲಿ ಇದುವರೆಗೆ ಕಮಿಟಿ ಇರಲಿಲ್ಲ. ಆದ್ದರಿಂದ ಹೈ ಲೆವೆಲ್ ಕಮಿಟಿ ಮಾಡಿದ್ದಾರೆ. That is the principle. That Committee, selected persons ಅಂತ ಯಾರನ್ನೂ ಮಾಡುತ್ತಾರೋ, ಸೆಲೆಕ್ಟಡ್ ಅಂದರೆ ಇವರು ಹೇಳುವುದು ಬರಿ ಪರ್ಸನ್ಸ್ ಅಂದರೆ ಸಾಕಲ್ಲವೇ ಸೆಲೆಕ್ಟಡ್ ಎಂದು ಹೇಳಬೇಡಿ ಎಂದು, ಒಂದು ಸಾರಿ ಸೆಲೆಕ್ಟಡ್ ಅಂದರೆ in the normal course their recommendations will be accepted.

ಶ್ರೀ ಎಸ್.ಎಸ್. ಪಾಟೀಲ್: ಇದರಲ್ಲಿ ಅರ್ಥ ಇಲ್ಲ, ಸ್ವಲ್ಪ ತಿದ್ದುಪಡಿ ಮಾಡಬೇಕು.

ಶ್ರೀ ಬಿ. ಸೋಮಶೇಖರ್: 2(ಬಿ)ನಲ್ಲಿ, instead of "... after following such procedure as may be prescribed prepare a list of selected presons..." ಅನ್ನುವುದಕ್ಕೆ ಬದಲಾಗಿ you may say:

"... preprare a list of eligible persons to be appointed.." ಎಂದು ಹೇಳಬೇಕು. It is Because this Committee will not select and appoint. It is only a recommendatory Committee.

ಶ್ರೀ ಡಿ.ಬಿ. ಚಂದ್ರೇಗೌಡ: ಡಿಫರೆಂಟ್ ಏರಿಯಾ, ಒಂದು ಆದರೇ ಸರಿ ಆದರೆ ನಿಮ್ಮ ಮಂಡ್ಯ ಜಿಲ್ಲೆಗೆ ಆಯ್ಕೆ ಮಾಡಬೇಕು ಎಂದರೆ ಸೆಲೆಕ್ಟಡ್ ಪರ್ಸನ್ ಅಂತ ಹೇಳಬಹುದು. It it is for different districts, different areas, different persons, ಆಗ ಫ್ಯಾನೆಲ್ ಅಂತ ಹೇಳಬೇಕು, It is in totality. So, that final list ಸರ್ಕಾರಕ್ಕೆ ಕಳುಹಿಸುತ್ತಾರೆ. That will be approved, For the entries State, that is the meaning of it.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಎಸ್.ಎಸ್. ಪಾಟೀಲ್ ಅವರ ಅನುಮತಿ ತೆಗೆದುಕೊಂಡು ಕನ್ನಡದಲ್ಲಿ ಓದುತ್ತೇನೆ. ಆ 2(ಎ) (2)ನೇ ಉಪ ಪ್ರಕರಣದ ಅಡಿಯಲ್ಲಿ ಕಮಾಂಡೆಂಟ್‌ಗಳಾಗಿ ನೇಮಕಗೊಳ್ಳಲು ನಿಯಮಿಸಲಾದ ವಿದ್ಯಾರ್ಹತೆಯನ್ನು ಹೊಂದಿದ ವ್ಯಕ್ತಿಗಳ ಆಯ್ಕೆಗಾಗಿ ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ಸಮಿತಿಯು ಇರತಕ್ಕದ್ದು. ಹಾಗಾಗಿ ಬೆಂಗಳೂರು, ಮಂಡ್ಯ, ತುಮಕೂರು ಈ ಜಿಲ್ಲೆಗಳಿಂದ ಒಂದೊಂದು ಲಿಸ್ಟ್ ಮಾಡಿ ಕಳುಹಿಸುತ್ತಾರೆ. ಇವರು ಹೇಳುವುದು ಏನೆಂದರೆ ಈ ಲಿಸ್ಟ್‌ನಿಂದ ಸರ್ಕಾರ ಫೈನಲ್ ಆಯ್ಕೆ ಮಾಡುತ್ತಾರೆ ಎನ್ನುವುದು ಈ ತಿದ್ದುಪಡಿ ಮಂಡಿಸಿರುವ ಉದ್ದೇಶ. ಒಂದು ಸಲ ಒಂದೊಂದು ಜಿಲ್ಲೆಯಲ್ಲಿ ಒಬ್ಬೊಬ್ಬರನ್ನು ಆಯ್ಕೆ ಮಾಡಿದ ಮೇಲೆ ಅದರಿಂದ ಫರ್ದರ್ ಆಯ್ಕೆ ಸರ್ಕಾರ ಹೇಗೆ ಮಾಡುತ್ತದೆ?

SRI D.B. CHANDRE GOWDA: The Government in only to approve the list submitted by the Committee. ಅದಕ್ಕೆ ನಿಮಗೆ ಅರ್ಥ ಮಾಡಿಕೊಳ್ಳಬೇಕಾದದ್ದು ಏನೆಂದರೆ ವ್ಯಕ್ತಿಗಳ ಆಯ್ಕೆಗಾಗಿ ಅಂದರೆ ಬೇರೆ ಬೇರೆ ಭಾಗದ ವ್ಯಕ್ತಿಗಳನ್ನು ಅವರು ಪಟ್ಟಿ ಮಾಡಿ ಸರ್ಕಾರಕ್ಕೆ ಕಳುಹಿಸುತ್ತಾರೆ. Still, if you have got any doubt, we can correct it and then pase it.

ಶ್ರೀ ಕರಿಯಣ್ಣ: ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಕೇವಲ ವ್ಯಕ್ತಿಗಳ ಆಯ್ಕೆಗಾಗಿ ಎಂದು ಕಳುಹಿಸಿರತಕ್ಕಂತಹ ಕಮ್ಯಾಂಡೆಂಟ್ಸ್‌ಗಳ ಪ್ರಪೋಸಲ್ಸ್ ಕಳುಹಿಸುವಂತಹವರು ಅವರದು ಇದ್ದರೂ ಸಹಿತ ಇದರಲ್ಲಿ ರಿಸರ್ವೇಷನ್ನೇ ಇಲ್ಲ. 27 ಜಿಲ್ಲೆಗಳಿಗೆ 27 ಜನರನ್ನು ಯಾರೂ ಬೇಕಾದರೂ ನೇಮಕ ಮಾಡಲಿಕ್ಕಾಗುತ್ತದೆ. ಇದರಲ್ಲಿ ಕ್ಯಾಟಗರಿವೈಸ್ ರಿಸರ್ವೇಷನ್ ಸಹಿತ ಸೇರಿಸಿಕೊಂಡು ಮಾಡುವುದು ಒಳ್ಳೆಯದು. ರೂಲ್ಸ್‌ನಲ್ಲಾದರೂ ಅದನ್ನು ತಿದ್ದುಪಡಿ ಮಾಡುವುದು ಒಳ್ಳೆಯದು ಕಾರಣವೆಂದರೆ ಈ ರಿಸರ್ವೇಷನ್ ಇಲ್ಲದೇನೆ ಎಲ್ಲಾ ಕಮಾಂಡೆಂಟರನ್ನು ಅವರು ಆರಿಸಿ ಕಳುಹಿಸಿದ್ದನ್ನು ಒಪ್ಪಿಕೊಳ್ಳಲು ಕಷ್ಟವಾಗುತ್ತದೆ. ಇದನ್ನು ಸಹಿತ ರೂಲ್ಸ್‌ನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ.

ಶ್ರೀ ರಾಜಾ ಅಮರೇಶ್ವರ ನಾಯಕ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕಂತಹ ವಿಚಾರಗಳನ್ನು ನಾವು ರೂಲ್ಸ್ ಫ್ರೇಮ್ ಮಾಡಿಕೊಳ್ಳುವ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಂಡು ಆ ರೂಲ್ಸ್‌ಗಳನ್ನು ಫ್ರೇಂ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಈಗ ತಾವು ತಂದಂತಹ ಈ ತಿದ್ದುಪಡಿ ಬಹುಶ: ನಾನು ಹೇಳಬೇಕೆಂದರೆ ಈ ಗೃಹರಕ್ಷಕ ದಳ ಇದೆಯೇ, ಇಲ್ಲವೇ ಅನ್ನುವ ಹಾಗಿದೆ. ಬಹುಶ: ಅದರ

ಅಸ್ತಿತ್ವ ಇದರಲ್ಲಿ ಇದ್ದ ಹಾಗೆ ಕಾಣುವುದಿಲ್ಲ, ಆದಕಾರಣ ಅದರ ಅಸ್ತಿತ್ವ ಉಳಿಯುವ ಹಾಗೆ ಒಂದು ಸಂಪೂರ್ಣವಾದ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ, ಎಲ್ಲಿ, ಯಾವ ಊರಿನಲ್ಲಿ ಯಾವ ತಾಲ್ಲೂಕು ಮಟ್ಟದಲ್ಲಿ ಏನಿದರೆ ಬಗ್ಗೆ ಇದೆ, ಹಿಂದೆ ಅದಕ್ಕೆ ಬಹಳ ಮಹತ್ವ ಇತ್ತು. ಇವತ್ತು ಗೃಹರಕ್ಷಕ ದಳದಲ್ಲಿ ಯಾವ ಮಹತ್ವವನ್ನು ಇಟ್ಟಿಲ್ಲ. ಆ ಕಾರಣದಿಂದ ಇದರಲ್ಲಿ ಸಫಲವಾದ ತಿದ್ದುಪಡಿಯನ್ನು ತಂದು ಎಲ್ಲಾ ಹಂತಗಳಲ್ಲಿಯೂ ನೇಮಕ ಮಾಡುವಂತಹ ಒಂದು ತಿದ್ದುಪಡಿ ತನ್ನಿ. ಇಲ್ಲದಿದ್ದರೆ ಏನೂ ಉಪಯೋಗವಾಗುವುದಿಲ್ಲ. ಸುಮ್ಮನೆ ಒಬ್ಬರನ್ನು ನೇಮಿಸುತ್ತೀರಿ ಅದರಲ್ಲಿ ಯಾವ ಅರ್ಥ ಇಲ್ಲ. ಅವರಿಂದ ಯಾವ ಕೆಲಸಗಳು ನಡೆಯುವುದಿಲ್ಲ. ಇವರನ್ನು ನೇಮಿಸುತ್ತೀರಿ ಆದರೆ ಇವರಿಗೆ ಏನು ಕೆಲಸ ಎಂದು ಎಲ್ಲಿ ಹೇಳಿದ್ದೀರಿ? ಇವರಿಗೇನಾದರೂ ಮುಂದೆ ಊರೂರುಗಳಲ್ಲಿ ಅಥವಾ ಬೇರೆ ಬೇರೆ ಕಡೆ ತಾಲ್ಲೂಕುವಾರು ನೇಮಕ ಮಾಡುವುದಕ್ಕೆ ಇವರಿಗೆ ಅಧಿಕಾರ ಕೊಟ್ಟಿದ್ದಾರೆಯೇ? ಹಾಗಿಲ್ಲದೆ ಕೇವಲ ಇವರೊಬ್ಬರನ್ನು ನೇಮಿಸುವುದರಿಂದ ಏನೂ ಉಪಯೋಗ ಇಲ್ಲ. ಆದ್ದರಿಂದ ಯಾವ ಉಪಯೋಗವೂ ಆಗಿಲ್ಲ. ಆ ಗೃಹರಕ್ಷಕ ದಳ ಇದೆ ಅನ್ನುವ ಹಾಗೇ ಇಲ್ಲ ಸುಮ್ಮನೆ ಮಂತ್ರಿಗಳಿದ್ದಾರೆ, ಡೈರೆಕ್ಟರ್ ಇದ್ದಾರೆ ಇಷ್ಟೇ ಆಯಿತು ಹೊರತು, ಮೊದಲು ಚಳುವಳಿ ಆದಾಗ ಈ ಗೃಹ ರಕ್ಷಕ ದಳ ಪೊಲೀಸ್‌ರ್‌ಗಿಂತ ಹೆಚ್ಚು ಕೆಲಸವನ್ನು ಮಾಡುತ್ತಿದ್ದರು. ಇವತ್ತು ಅದಕ್ಕೆ ಮಹತ್ವ ಕೊಟ್ಟಿಲ್ಲ. ತಮ್ಮ ಊರು ಕಾಯುವುದು ಇತ್ಯಾದಿ ಕೆಲಸ ಮಾಡುತ್ತಿದ್ದರು. ಇವತ್ತು ಅವರಿಗೆ ಏನೂ ವ್ಯವಸ್ಥೆ ಇಲ್ಲ. ಸಮ್ಮನೆ ಹೆಸರಿಗೆ ಇಟ್ಟಿರುವುದೇಕೆ, ಏನು ಪ್ರಯೋಜನ? ತೆಗೆದುಬಿಡಿ. ಇಲ್ಲವೇ ಅವರಿಗೆ ಸಂಪೂರ್ಣ ಅಧಿಕಾರ ಕೊಡುವುದಾದರೆ ಕೊಡಿ, ಹಿಂದೆ ಇದ್ದಂತಹ ಅಧಿಕಾರದ ರೀತಿಯಲ್ಲಿ ಅವರಿಗೆ ಕೆಲಸ ಕೊಡಿ, ಅದಕ್ಕೆ ಏನು ಮಾಡುತ್ತೀರಿ?

ಶ್ರೀ ರಾಜಾ ಅಮರೇಶ್ವರ ನಾಯಕ್: ಶ್ರೀ ಎಸ್.ಎಸ್.ಪಾಟೀಲ್ ಹೇಳಿರತಕ್ಕಂತಹ ವಿಚಾರಗಳನ್ನು ನಾವು ಅವಲೋಕಿಸಿದಾಗ ಇವತ್ತು ಕರ್ನಾಟಕ ರಾಜ್ಯದ ಗೃಹರಕ್ಷಕ ದಳ ಒಂದು ಏನು ಸಂಸ್ಥೆ ಇದೆ ಇದು ರಾಷ್ಟ್ರದಲ್ಲಿಯೇ ಒಂದು ಉತ್ತಮವಾದ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿರತಕ್ಕಂತಹ ಗೃಹ ರಕ್ಷಕ ದಳ ತರಬೇತಿ ಕಾಲೇಜು ಇವತ್ತು ರಾಷ್ಟ್ರ ಮಟ್ಟದ ತರಬೇತಿಯನ್ನು ನೀಡತಕ್ಕಂತಹ ಕಾಲೇಜಾಗಿದೆ; ಮತ್ತು ಇತರ ರಾಜ್ಯಗಳಿಗೆ ಹೋಲಿಸಿದಾಗ ಅಲ್ಲೆಲ್ಲಾ ಇಲಾಖೆಯಿಂದ ಇರತಕ್ಕಂತಹ ಪೇಯ್ಡ್ ಕಮಾಂಡೆಂಟ್ಸ್ ಇರುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ಸ್ವಯಂ ಪ್ರೇರಣೆಯಿಂದ ಯಾವುದೇ ಅಪೇಕ್ಷೆ ಇಲ್ಲದೆ ಕೆಲಸ ಮಾಡುವಂತಹ ವ್ಯಕ್ತಿಗಳಿದ್ದಾರೆ ಅನೇಕ ಸಂದರ್ಭದಲ್ಲಿ ಅವರು ಪೊಲೀಸ್ ವ್ಯವಸ್ಥೆಗೆ ಸಹಕಾರಿಯಾಗಿ ರಾಜ್ಯದಲ್ಲಿ ಸುಖ, ಶಾಂತಿ, ನೆಮ್ಮದಿಯನ್ನು ತರುವಂತಹ ದಿಶೆಯಲ್ಲಿ ಹಗಲು ರಾತ್ರಿ ಶ್ರಮಪಟ್ಟು ಕೆಲಸವನ್ನು ಮಾಡುತ್ತಿದ್ದಾರೆ. ಇದರಲ್ಲಿ ಕೇವಲ ಮೂರು ಅಂಶಗಳನ್ನು ಗಮನಕ್ಕೆ ತಂದು ಒಂದು ಆಯ್ಕೆ ಸಮಿತಿ, ವಿದ್ಯಾರ್ಹತೆ ಮತ್ತು ಅವಧಿ ಮುಖ್ಯವಾಗಿರುವ ಕಾರಣ ಇದು ಮೂರು ಮುಖ್ಯ ಅಂಶಗಳನ್ನು ನಾನು ಇಲ್ಲಿ ತಂದಿದ್ದೇನೆ. ಅದೇ ರೀತಿ ಮಾನ್ಯ ಸದಸ್ಯರು ಏನೇನು ಅಂಶಗಳನ್ನು ವ್ಯಕ್ತಪಡಿಸಿದ್ದಾರೆ. ಆ ಅಂಶಗಳನ್ನು ನಾವು ರೂಲ್ಸ್ ಮಾಡತಕ್ಕಂತಹ ಸಂದರ್ಭದಲ್ಲಿ ಗಮನದಲ್ಲಿಟ್ಟುಕೊಂಡು ಅವರ ಕಳಕಳಿಯನ್ನು ಗಮನದಲ್ಲಿರಿಸಿಕೊಂಡು ಆ ರೂಲ್ಸ್ ಅನ್ನು ಫ್ರೇಮ್ ಮಾಡಿ ಉತ್ತಮವಾದಂತಹ ವ್ಯವಸ್ಥೆಯನ್ನು ಕೊಡತಕ್ಕಂತಹ ದಿಶೆಯಲ್ಲಿ ಕೆಲಸ ಮಾಡುತ್ತೇವೆಂದು ತಮ್ಮ ಮುಖಾಂತರ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

3.50 ಪಿಎಂ

SRI D.B. CHANDRE GOWDA: In Section 3 of the Karnataka Home Gurads Act, 1962, it says:

" Constitution of Home Gurads and appointement of Commandant General and Commandants:

(2) The State Government may appoint as many Commandants as it may consider necessary for the proper governance and conduct of the Home Guards and shall specify the ares over which each such Commandant shall have jurisdiction."

" the State Government may appoint as many as Commandants. " What is the procedure? We have adopted a procedure . The procedure is to appoint these Commandants by a Committee constituted under the law and then submit it to the State Government. This is all.

ಈ ಕೆಳಗಡೆ ಇರತಕ್ಕಂಥಾದ್ದು.

"The Committee referred to in sub-section (2A) shall after following such procedure."

It is a procedure of the Committee which can follow.

ಆದರೆ ಸೆಲೆಕ್ಷನ್‌ಗೆ ಏನು ಮಾಡಬೇಕೆಂದು ಈ ಸೆಕ್ಷನ್ ಮೂರರಲ್ಲಿ ಹೇಳುತ್ತಾರೆ, ಅದಕ್ಕೆ ಒಂದು ಕಮಿಟಿಯನ್ನು ಮಾಡಬೇಕೆಂದು ಹೇಳಿದ್ದೇವೆ. That is all the purpose of this Bill. ಇಷ್ಟರ ಮೇಲೂ ನಿಮ್ಮ ಶಂಕೆಗಳನ್ನು ಏನು ವ್ಯಕ್ತಮಾಡಿದ್ದೀರಿ, ಆಗತ್ಯ ಕಂಡರೆ ಅದನ್ನು ಸರಿಪಡಿಸಿ ನಾಳೆ ಇವರ ಜತೆ ಮಾತನಾಡಿ ತಮಗೆ ತಿಳಿಸುತ್ತೇನೆ. ಆಗತ್ಯ ಬಿದ್ದರೆ ಸರಿಯಾದ ತಿದ್ದುಪಡಿಯೊಂದಿಗೆ ತರುತ್ತೇನೆ. ಇದನ್ನು ನಾಳೆ ತೆಗೆದುಕೊಳ್ಳಬಹುದು.

ಶ್ರೀ ಬಿ. ಸೋಮಶೇಖರ್: ಆ ಕಮಿಟಿ ಏನು ಮಾಡಿದ್ದೀರಿ, ಆ ಕಮಿಟಿಯನ್ನೇ ಸೆಲೆಕ್ಟ್ ಮಾಡುತ್ತಿಲ್ಲ. ಅದು ಏನಿದ್ದರೂ ರಾಜ್ಯಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. Ultimately the State Government will approve the list submitted by the district committee. ಸರಿತಾನೆ? ಅದಕ್ಕೆ ಎರಡು ಸೆಕ್ಷನ್‌ಗಳನ್ನು ರಿಪ್ಲೇಸ್ ಮಾಡಬೇಕು. ಅದು ಯಾವುದು ಎಂದರೆ-

" The Committee referred to in sub-section (2A) shall after following such procedure as may be prescribed prepare a list of selected persons.."

ಬದಲಾಗಿ - prepare a list of eligible persons to be appointed or eligible persons or panel of persons appointed as Commandants under sub-section (2) and send the list of such eligible to the State Government."

ಇಷ್ಟು ಹೇಳಿದರೆ ಸಾಕು.

ಶ್ರೀ ಡಿ.ಬಿ. ಚಂದ್ರೇಗೌಡ: ಇದು ಬಹಳ ಹಿಂದೆಯೇ ತಂದಿರತಕ್ಕಂಥ ಬಿಲ್. ಆದ್ದರಿಂದ ಸ್ವಲ್ಪ ವೆರಿಫೈ ಮಾಡಿ ನಾಳೆ ಇದನ್ನು ತೆಗೆದುಕೊಳ್ಳೋಣ. Let me make it very clear. That is why, we will take it tomorrow.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ನನ್ನ ಒಂದೇ ಒಂದು ಪ್ರಶ್ನೆ ಏನೆಂದರೆ ನಾವು ಇಲ್ಲಿ ಗೃಹರಕ್ಷಕದಳ ಕುರಿತಂತೆ ಯೋಚನೆ ಮಾಡುತ್ತಿದ್ದೇವೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇದೇರೀತಿ ಕೆಲಸ ಮಾಡಿ ಸಹಾಯ ಮಾಡುತ್ತಿರುವಂಥ ಗ್ರಾಮ ದಳಪತಿಗಳು ಇದ್ದಾರೆ. ಅವರು ಯಾವ ಸ್ಥಿತಿಯಲ್ಲಿದ್ದಾರೆ ಎನ್ನುವುದು ಸರ್ಕಾರದ ಗಮನದಲ್ಲಿದೆ. ಅವರು ನಮಗೆಲ್ಲಾ ಅಗತ್ಯತೆಗಳನ್ನು ಪೂರೈಸುವುದಕ್ಕೆ, ಅವರ ಸೇವೆಯನ್ನು ಸಲ್ಲಿಸುವುದಕ್ಕೆ ಅವರು ನಮಗೆ ಸದಾ ಸಹಾಯ ಮಾಡುತ್ತಾ ಇರುತ್ತಾರೆ. ಬರೇ ಸರ್ಕಾರದ ಕಾರ್ಯಕ್ರಮಗಳಲ್ಲ, ಬೇರೆಬೇರೆ ಸಂಘಸಂಸ್ಥೆಗಳು, ಬೇರೆಬೇರೆ ಧಾರ್ಮಿಕ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವಾಗ ಅವರು ತಮ್ಮ ಪ್ರಾಮಾಣಿಕವಾದಂಥ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಇವತ್ತು ಈ ಗ್ರಾಮ ದಳಪತಿಗಳು ಯಾವ ಸ್ಥಿತಿಯಲ್ಲಿ ಇದ್ದಾರೆ ಎಂದರೆ, ಅವರಿಗೆ ನಿಮ್ಮ ಎಸ್.ಪಿ.ಗಳು ಒಂದು ಐಡೆಂಟಿಟಿ ಕಾರ್ಡನ್ನೂ ಕೊಡುವುದಿಲ್ಲ. ಅವರು ನಾವು ಸೇವೆ ಮಾಡುತ್ತೇವೆ, ನಮಗೆ ಒಂದು ಐಡೆಂಟಿಟಿ ಕಾರ್ಡು ಕೊಡಿ ಎಂದರೆ ಕೊಡುತ್ತಿಲ್ಲ. ಅವರನ್ನು ಇಷ್ಟು ನಿರ್ಲಕ್ಷ್ಯ ಮಾಡಿ ಅವರ ಬಗ್ಗೆ ಯಾವುದೇ ಗಮನವಿಲ್ಲದೆ ಇರುವಂಥ ಸ್ಥಿತಿ ಇದೆ. ಅವರ ಬೇಡಿಕೆಗಳು ಬೇರೆಬೇರೆಯಾಗಿ ಅನೇಕ ಇವೆ. ನಾನು ಅದನ್ನೆಲ್ಲ ಇಲ್ಲಿ ವಿಸ್ತೃತವಾಗಿ ಇಲ್ಲಿ ಪ್ರಸ್ತಾಪಿಸುವುದಿಲ್ಲ. ಹಾಗಾಗಿ ಗ್ರಾಮ ದಳಪತಿಗಳ ಬಗ್ಗೆ ಸರ್ಕಾರ ಇದೇರೀತಿಯಾದಂಥ ಚಿಂತನೆಯನ್ನು ಮಾಡಿ, ಏನು ಅವರು ಈ ಕೆಲಸ ನಿರ್ವಹಿಸುತ್ತಿದ್ದಾರೆ, ಅದರ ಬಗ್ಗೆ ಕೂಡ ವಿಶೇಷವಾದ ಗಮನವನ್ನು ಕೊಡಬೇಕು ಮತ್ತು ಸಂಬಂಧಪಟ್ಟವರಿಗೆ ಐಡೆಂಟಿಟಿ ಕಾರ್ಡುಗಳನ್ನು ಕೊಡುವುದು, ಅವರು ಬೇರೆಬೇರೆ ತಮ್ಮ ಚಟುವಟಿಕೆಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ಮತ್ತು ಇದಕ್ಕೆ ಪೂರಕವಾದಂಥ ಒಂದು ಧ್ವನಿ ಸರ್ಕಾರದಿಂದ ಬರಬೇಕು. ಎನ್ನುವಂಥ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

ಶ್ರೀ ರಾಜಾ ಅಮರೇಶ್ವರ ನಾಯಕ: ಈಗ ಗೃಹರಕ್ಷಕ ದಳಕ್ಕೆ ಸಂಬಂಧಪಟ್ಟಂತೆ ವಿಚಾರಗಳನ್ನು ನಾವು ಇಲ್ಲಿ ಹೇಳಬೇಕಾಗುತ್ತದೆ. ತಾವು ಪ್ರಸ್ತಾಪ ಮಾಡಿರತಕ್ಕಂಥ ವಿಚಾರಗಳೆಲ್ಲವನ್ನೂ ಕೂಡ ಗಮನಿಸಿ ನಾಳೆ ಮತ್ತೊಮ್ಮೆ ತಂದಾಗ ಅವುಗಳ ಬಗ್ಗೆ ಮತ್ತೊಮ್ಮೆ ನಾನು ಹೇಳುತ್ತೇನೆ.

ಉಪಾಧ್ಯಕ್ಷರು: ಇದನ್ನು ನಾಳೆ ತೆಗೆದುಕೊಳ್ಳೋಣ.

(ಆ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕ, 2002 ಪರ್ಯಾಲೋಚನಾ ಪ್ರಸ್ತಾವ

+ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.